# 5. ಸ.ಕಿ.ಪ್ರಾ.ಶಾಲೆ ಆನೆಗದ್ದೆ ರಸ್ತೆ

## 1. ಶಾಲೆಯ ಹಿನ್ನೆಲೆ:

1963 ರಲ್ಲಿ ಸ್ಥಾಪನೆಯಾದ ಈ ಶಾಲೆಯು ಮಲೆನಾಡಿನ ತಪ್ಪಲಿನಲ್ಲಿದ್ದು, ಕೃಷಿ ಪ್ರಧಾನವಾದ ಸಾಮಾಜಿಕ ಹಿನ್ನೆಲೆಯುಳ್ಳ, ಸುಮಾರು 150 ಮನೆಗಳನ್ನು ಹೊಂದಿರುವ ಗ್ರಾಮದಲ್ಲಿದೆ. ಹುಂಚ ಗ್ರಾಮದಿಂದ 5 ಕಿ.ಮೀ ದೂರದಲ್ಲಿದೆ. 04 ಹುದ್ದೆಗಳು ಮಂಜೂರಾಗಿದ್ದು, ಪ್ರಸ್ತುತ ಒಬ್ಬರು ಪೂರ್ಣಕಾಲಿಕ ಶಿಕ್ಷಕರು, ಇಬ್ಬರು ಗೌರವ ಶಿಕ್ಷಕರು ಕರ್ತವ್ಯನಿರ್ವಹಿಸುತ್ತಿದ್ದಾರೆ.

## 2. ಶಾಲೆಯಲ್ಲಿ ಕೈಗೊಂಡ ನಾವಿನ್ಯಯುತ ಚಟುವಟಿಕೆಗಳು:

- ಉತ್ತಮವಾದ ಶಾಲಾ ಕೈತೋಟ, ಆಕರ್ಷಕ ಹಸಿರುಸಸ್ಯಗಳು, ಔಷಧಿ ಸಸ್ಯಗಳ ನಿರ್ವಹಣೆ
- ಕಲಿಕೆಗೆ ಸಹಾಯಕವಾದ ವಿವಿಧ ಪರಿಸರದ ಮಾದರಿಗಳು ದಿಕ್ಕುಗಳ ಮಾದರಿ, ಸೌರವ್ಯೂಹದ ಮಾದರಿ, ನೀರಿನ ಮಿತಬಳಕೆಗೆ ರೂಫ್ ಗಾರ್ಡನ್ , ಕ್ಷಿಪಣಿ ಮಾದರಿ
- ಮಂದಿರ , ಪ್ರವೇಶ ದ್ವಾರ , , ಕಲಿಕೆಗೆ ಸಹಕಾರಿ ಮರದ ಆಸನಗಳ ವ್ಯವಸ್ಥೆ
- . ಮನೋರಂಜನೆ ಹಾಗೂ ಸಾಹಸ ಕ್ರೀಡೆಗಳಿಗೆ ಪರಿಕರಗಳ ವ್ಯವಸ್ಥೆ
- ನಲಿಕಲಿ ತರಗತಿ ಮಕ್ಕಳಿಗೆ ಕುಳಿತುಕೊಳ್ಳಲು ಆಸನದ ಹಾಗೂ ಟೇಬಲ್ ಗಳ ವ್ಯವಸ್ಥೆ
- ಅಡಿಕೆ-ತೆಂಗು ಹಾಗೂ ತರಕಾರಿ ಗಿಡಗಳ ಪೋಷಣೆ

## 3. ಆರಂಭದಲ್ಲಿ ಎದುರಿಸಿದ ಸಮಸ್ಯೆಗಳು:

ಪ್ರಾರಂಭದಲ್ಲಿ ಕಡಿಮೆ ಮಕ್ಕಳಿದ್ದು , ಪೋಷಕರ ಹಾಗೂ ಸಮುದಾಯದ ಸಹಭಾಗಿತ್ವ ಕಡಿಮೆಯಿತ್ತು . ಆಗತಾನೇ ಕಟಾವಾದ ಅಕೇಸಿಯ ಮರಗಳು, ಮತ್ತು ಶಾಲೆಯಲ್ಲಿ ನೀರಿನ ವ್ಯವಸ್ಥೆ ಇಲ್ಲದಿದ್ದು , ಶಾಲೆಯ ವಾತಾವರಣ ಕಲಿಕೆಗೆ ಪೂರಕವಾಗಿರಲಿಲ್ಲ.

## 4. ಪರಿಹಾರಕ್ಕೆ ತಾವು ಕೈಗೊಂಡ ಕ್ರಮಗಳು:

1. ಪೋಷಕರ ಮನೆಭೇಟಿ
2. ಮಕ್ಕಳ ಗೈರುಹಾಜರಿ ತಡೆಯಲು ಪೋಷಕರೊಡನೆ ಸಂವಾದ
3. ಮಕ್ಕಳನ್ನು ಶಾಲೆಗೆ ಸೆಳೆಯಲು ಇಂಗ್ಲೀಷ್ ಕಲಿಕೆಗೆ ಆದ್ಯತೆ
4. ಶಿಕ್ಷಣಾಸಕ್ತರ ಸಲಹೆ ಪಡೆಯಲಾಯಿತು.

5. ಗರಿಷ್ಠ ಸಮಯ ಶಾಲೆಯಲ್ಲಿ ತೊಡಗಿಸಿಕೊಳ್ಳುವುದು

6. ಪ್ರತಿಭಾ ಕಾರಂಜಿ ಹಾಗೂ ಇತರ ಸ್ಪರ್ಧೆಗಳಲ್ಲಿ ಹೆಚ್ಚು ಬಹುಮಾನ ಗಳಿಸುವುದರ ಮೂಲಕ ಪೋಷಕರಿಗೆ

ಶಾಲೆಯ ಬಗ್ಗೆ ಅಭಿಮಾನ ಹೆಚ್ಚುವಂತೆ ಮಾಡುವುದು.

7. ಪರಿಸರಮಿತ್ರ ಕಾರ್ಯಕ್ರಮಕ್ಕೆ ಭಾಗವಹಿಸಿ ಹಳದಿ ಶಾಲೆ ಪ್ರಶಸ್ತಿ ಗೆಲ್ಲುವ ಮೂಲಕ ಸಾರ್ವಜನಿಕರ ಗಮನ

ಸೆಳೆಯುವ ಪ್ರಯತ್ನ. ಈ ಮೂಲಕ ಶಾಲೆಗೆ ಬೇಕಾದ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಂಡಿರುವುದು.

## 5. ದಾನಿಗಳು

ಈ ಶಾಲೆಯಲ್ಲಿ ನಿರ್ಮಾಣಗೊಂಡಿರುವ, ಶಾಲಾ ಪ್ರವೇಶ ದ್ವಾರ, ಸರಸ್ವತಿ ಮಂದಿರ, ಶಾಲಾವರಣದ ನೆಲಹಾಸು, ಮರದ ಆಸನಗಳ ವ್ಯವಸ್ಥೆ, ಕೈತೋಟದ ಕಾರ್ಯ, ವಾರ್ಷಿಕೋತ್ಸವಕ್ಕಾಗಿ ವಂತಿಗೆ ಹೀಗೆ ಪ್ರತಿಯೊಂದು ದಾನಿಗಳಿಂದ ಪಡೆದಿದ್ದಾಗಿದೆ.

## 6. ಶಾಲೆಯ ವಿಶೇಷ ಕಾರ್ಯಗಳು :

1. 2013-14 ರಲ್ಲಿ ಹಳದಿ ಶಾಲೆ ಪ್ರಶಸ್ತಿ, ವೈಜ್ಞಾನಿಕ ಮಾದರಿಗಳು, ಪೋಷಕರ ಶ್ರಮದಾನದ ಮೂಲ ಸುಮಾರು 500 ಗಿಡ ನೆಡಲಾಗಿದೆ. ಕಂಪ್ಯೂಟರ್ ಪ್ರೊಜೆಕ್ಟರ್ ನೂಲಕ ಭಾಷಾ ಪ್ರಯೋಗಾಲಯ ಚಟುವಟಿಕೆ ನಿರ್ವಹಿಸಲಾಗುತ್ತಿದೆ. ಒಟ್ಟಾರೆಯಾಗಿ ಶಿಶು ಸ್ನೇಹಿ – ಚಟುವಟಿಕೆ ಆಧಾರಿತ ಕಲಿಕಾ ಉಪಕ್ರಮಗಳಿಂದ ಶಾಲೆಯು ಸರ್ವತೋಮುಖ ಪ್ರಗತಿಯ ಹಾದಿಯಲ್ಲಿದೆ.





